2) ಅಮಿನಾಭಾವಿಯಿಂದ ಧಾರವಾಡದವರೆಗೆ 4 ಕಿ.ಮಿ ಉದ್ದಕ್ಕೆ ಹಾಕಬೇಕಾಗಿರುವ ಸುಮಾರು 1.00 ಕೋಟಿ ರೂಗಳ ಉಕ್ಕಿನ ಕೊಳವೆಗಳನ್ನು ಭಾರತದ ಉಕ್ಕು ಪ್ರಾಧಿಕಾರದಿಂದ (ಸೈಯಿಲ್) ಪಡೆದುಕೊಳ್ಳಲಾಗಿದೆ. ಈ ಕೊಳವೆಗಳಿಗೆ ಒಳ ಮತ್ತು ಹೊರಭಾಗಗಳಿಗೆ ಕಾಂಕ್ರಿಟ್ ಲೈನಿಂಗ್ ಮಣ್ಣು ಅಗೆತ, ಕೊಳವೆ ಹಾಕುವಿಕೆ ಮತ್ತು ಜೋಡಣೆ ಕೆಲಸಕ್ಕೆ ಟೆಂಡರ್‌ಗಳನ್ನು ಕರೆಯಲಾಗಿದ್ದು ದಿನಾಂಕ 6-9-91ನ್ನು ಅಂತಿಮ ದಿನವಾಗಿ ನಿಗದಿಪಡಿಸಲಾಗಿದೆ.

ಎನ್.ಜಿ.ಇ.ಎಫ್.ಸಂಸ್ಥೆಯವರೊಡನೆ ಅಂದಾಜು 2.00 ಕೋಟಿ ರೂಗಳ ವೆಚ್ಚದಲ್ಲಿ ಎಲ್ಲಾ ಮೂರು ಪಂಪಿನ ಮನೆಗಳಲ್ಲಿ ನೀರೆತ್ತುವ ಪಂಪಿನ ಸಲಕರಣೆಗಳನ್ನು ಅಳವಡಿಸಲು ಗುತ್ತಿಗೆ ನೀಡಲಾಗಿದೆ. ಹಾಗೂ 7.5 ಎಂಜಿಡಿ ಸಾಮರ್ಥ್ಯದ ಜಲಶುದ್ಧೀಕರಣಗಾರದ ಕೆಲಸಕ್ಕೆ ಗುತ್ತಿಗೆದಾರರನ್ನು ನೇಮಿಸಲಾಗಿದ್ದು, ಕೆಲಸವನ್ನು ಪ್ರಾರಂಭಿಸಲಾಗಿದೆ. ಆರು ಮೋಟಾರುಗಳ ಪೈಕಿ 5 ಮೋಟಾರುಗಳನ್ನು ಎನ್.ಜಿ.ಈ.ಎಪ್.ನಲ್ಲಿ ಪರೀಕ್ಷಿಸಲಾಗಿದ್ದು ಅವುಗಳನ್ನು ಅಳವಡಿಸುವ ಸ್ಥಳಗಳಿಗೆ ರವಾನಿಸಲು ಸಿದ್ಧಪಡಿಸಲಾಗಿದೆ.

3) ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದಿಂದ 32.00 ಲಕ್ಷ ರೂಗಳ ವಂತಿಗೆಯನ್ನು ಪಡೆಯಲಾಗಿದೆ.

4) ಹುಡ್ಕೋ ಸಂಸ್ಥೆಯಿಂದ ಸಾಲವನ್ನು ಪಡೆಯಲು 23-6-90 ರಂದು ಅರ್ಜಿಯನ್ನು ಸಲ್ಲಿಸಲಾಗಿದ್ದು ಸದರಿ ಸಂಸ್ಥೆಯ ದಿನಾಂಕ 2-5-91ರಲ್ಲಿ ಸಾಲವನ್ನು ಮಂಜೂರು ಮಾಡಿರುತ್ತದೆ.'.

5) ಹುಡ್ಕೋ ಸಂಸ್ಥೆಯವರು 455.00 ಲಕ್ಷರೂಗಳನ್ನು ಸಾಲವನ್ನು ಮಂಜೂರು ಮಾಡಿದ್ದು ಸಾಲದ ಮೊದಲ ಕಂತನ್ನು ಕೂಡಲೇ ಬಿಡುಗಡೆ ಮಾಡುವಂತೆ ಸದರಿ ಸಂಸ್ಥೆಯವರನ್ನು ಕೇಳಿಕೊಳ್ಳಲಾಗಿದೆ. ಈ ಯೋಜನೆಯನ್ನು ಜೂನ್ 92ರ ಒಳಗೆ ಚಾಲ್ತಿ ಮಾಡಲು ಉದ್ದೇಶಿಸಲಾಗಿದೆ.

ಅಕ್ಟೋಬರ್ ತಿಂಗಳಲ್ಲಿ ರಾಜ್ಯದ ಬೊಕ್ಕಸದಲ್ಲಿದ್ದ ಹಣ

2106 - ಶ್ರೀ ಗೋಪಿನಾಥ್ ಆರ್. ಸಾಂಡ್ರ (ಹುಬ್ಬಳ್ಳಿ ಗ್ರಾಮಾಂತರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 9ನೇ ಅಕ್ಟೋಬರ್ 1990ರಲ್ಲಿ ರಾಜ್ಯದ ಬೊಕ್ಕಸದಲ್ಲಿ ಎಷ್ಟು ಹಣ ಶೇಖರಣೆಯಾಗಿತ್ತು?

ಆ) ಪ್ರಸ್ತುತ ರಾಜ್ಯದ ಆರ್ಥಿಕ ಪರಿಸ್ಥಿತಿ ಹಾಗೂ ಶೇಖರಣೆಯಾಗದ ಹಣ ಎಷ್ಟು?

ಇ) ಸರ್ಕಾರ ಯೋಚಿಸಿದ ಹಾಗೂ ಆಯವ್ಯಯದಲ್ಲಿ ತೋರಿಸಿದ ಯೋಜನೆಗಳನ್ನು ಕಾರ್ಯಗತ ಮಾಡುವಲ್ಲಿ ಸರ್ಕಾರಕ್ಕೆ ತೊಂದರೆಯೇನು ಇಲ್ಲವೆ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಮಹಾಲೇಖಪಾಲರು ರಾಜ್ಯದ ಹಣಕಾಸಿನ ವ್ಯವಹಾರದ ಲೆಕ್ಕದ ಬಗ್ಗೆ ನೀಡಿರುವ ಮಾಸಿಕ ಲೆಕ್ಕ ಪತ್ರ ವರದಿಯಲ್ಲಿ ತಿಳಿಸಿರುವಂತೆ, ರಾಜ್ಯದ ಬೊಕ್ಕಸಕ್ಕೆ ಅಕ್ಟೋಬರ್ 90ರ ತಿಂಗಳ ಅಂತ್ಯದವರೆಗೆ ಶೇಖರಣೆಯಾದ ರಾಜಸ್ವ ಹಣ 1859.27 ಕೋಟಿ ರೂಪಾಯಿಗಳು

ಆ) ರಾಜ್ಯದ ಪ್ರಸ್ತುತ ಆರ್ಥಿಕ ಪರಿಸ್ಥಿತಿಯು ತೃಪ್ತಿಕರವಾಗಿದೆ ಹಾಗೂ ಮಹಾಲೇಖಪಾಲರು ಇತ್ತೀಚೆಗೆ ನೀಡಿರುವ ಹಣಕಾಸಿನ ವ್ಯವಹಾರದ ಲೆಕ್ಕ ಪತ್ರ ಮಾಸಿಕ ವರದಿಯ ಪ್ರಕಾರ ರಾಜ್ಯದ ಬೊಕ್ಕಸಕ್ಕೆ ಜೂನ್ 91ರ ತಿಂಗಳ ಅಂತ್ಯದವರೆಗೆ ಶೇಖರಣೆಯಾದ ರಾಜಸ್ವ ಹಣ 912.28 ಕೋಟಿ ರೂಗಳು.

ಇ) ಸರ್ಕಾರವು ಯೋಜಿಸಿದ ಹಾಗೂ ಆಯ ವ್ಯಯದಲ್ಲಿ ತೋರಿಸಿದ ಯೋಜನೆಗಳನ್ನು ಕಾರ್ಯಗತ ಮಾಡುವಲ್ಲಿ ಬೇಕಾಗುವ ಸಂಪನ್ಮೂಲವನ್ನು ಕ್ರೂಢೀಕರಿಸುವ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದೆ.

ಹೈದರಾಬಾದ್ ಕರ್ನಾಟಕ ಅಭಿವೃದ್ಧಿ

2116 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಗೆ 50ಕೋಟಿ ಹಣವನ್ನು ಹಿಂದಿನ ವರ್ಷ ನೀಡಿದ್ದು ನಿಜವೇ?

2. ಕಳೆದ 2 ವರ್ಷದ ಅವಧಿಯಲ್ಲಿ ಈ 50 ಕೋಟಿಯಲ್ಲಿ ಖರ್ಚಾದ ಹಣವೆಷ್ಟು?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಯೋಜನೆ, ಸಾಂಖ್ಯಿಕ ಹಣಕಾಸು ಮತ್ತು ಸಾಂಖ್ಯಿಕ ಮಂತ್ರಿಗಳು) :

1) ಹೌದು.

2) 1990-91ರಲ್ಲಿ ಹಣವನ್ನು ಪೂರ್ಣವಾಗಿ ಉಪಯೋಗಿಸಲಾಗಿದೆ. 1991-92ನೇ ಸಾಲಿನಲ್ಲಿ ಅಯವ್ಯಯದಲ್ಲಿ ಉದ್ದೇಶಿಸಲಾಗಿರುವ 50 ಕೋಟಿ ರೂಗಳಲ್ಲಿ ಒಟ್ಟು 10-97 ಕೋಟಿ ರೂಗಳನ್ನು ಮೊದಲು 4 ತಿಂಗಳಲ್ಲಿ ವೆಚ್ಚಮಾಡಲಾಗಿದೆ.

ಸರ್ಕಾರಿ ಮನೆಗಳ ಬಗ್ಗೆ

2092-ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಖ್ಯ ಮಂತ್ರಿಗಳು, ಮಂತ್ರಿಗಳು ಹಾಗೂ ರಾಜ್ಯ ಮಂತ್ರಿಗಳು ಯಾರ್ಯಾರು ಸರ್ಕಾರಿ ಮನೆಗಳಲ್ಲಿ ವಾಸಿಸುತ್ತಿದ್ದಾರೆ.

ಆ) ಅವರುಗಳಿಗೆ ಒದಗಿಸಲಾಗಿರುವ ಪೀಠೋಪಕರಣಗಳಿಗೆ ತಗುಲಿರುವ ಒಟ್ಟು ವೆಚ್ಚ ಎಷ್ಟು? (ಎಲ್ಲಾ ಮಂತ್ರಿಗಳ ವಿವರಗಳನ್ನು ಪ್ರತ್ಯೇಕವಾಗಿ ಒದಗಿಸುವುದು)?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು):

ಅ) ಮತ್ತು ಆ) ಅನುಬಂಧದಲ್ಲಿ ವಿವರಿಸಲಾಗಿದೆ.